# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi - 591156

**E-mail:** rcubacademic2010@gmail.com rcuregistrar@gmail.com

ಕುಲಸಚಿವರ ಕಾರ್ಯಾಲಯ
Office of the Registrar

**Website:** www.rcub.ac.in
**Phone No.:** 0831-2565257/34


ಸಂಖ್ಯೆ: ರಾಚವಿಬೆ/ಕುಸಕಾ/ವಿದ್ಯಾಮಂಡಳ ವಿಭಾಗ/2020-21/ 1551 ದಿನಾಂಕ :21-08-2020

## ಸುತ್ತೋಲೆ

ವಿಷಯ: 2020–21 ನೇ ಸಾಲಿನ ಸ್ನಾತಕೋತ್ತರ (PG) ಮೂರನೇ ಸೆಮಿಸ್ಟರಗೆ ಪ್ರವೇಶ ಮುಂದುವರಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:21–08–2020

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ರಾಣಿಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ ಹಾಗೂ ಸಂಯೋಜಕರು/ನಿರ್ದೇಶಕರು ಸ್ನಾತಕೋತ್ತರ ಕೇಂದ್ರಗಳು ಅನುಭಾವ ಸಂಗಮ, ಬಾಗಲಕೋಟ, ಸ್ನಾತಕೋತ್ತರ ಕೇಂದ್ರ ವಚನ ಸಂಗಮ ತೊರವಿ, ವಿಜಯಪುರ ಮತ್ತು ಸ್ನಾತಕೋತ್ತರ ಕೇಂದ್ರ ಜಮಖಂಡಿ ಹಾಗೂ ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ ಬೆಳಗಾವಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸಗಳನ್ನು ನಡೆಸುತ್ತಿರುವ ಎಲ್ಲಾ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, 2020–21 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಮೂರನೇ ಸೆಮಿಸ್ಟರ ಅಧ್ಯಯನ ವಿಭಾಗಗಳಿಗೆ ಈ ಕೆಳಗಿನ ಷರತ್ತುಗಳನ್ವಯ ಹಾಗೂ ದಿನಾಂಕಗಳ ಪ್ರಕಾರ ಪ್ರವೇಶ ಮುಂದುವರಿಸುವ ಪ್ರಕ್ರಿಯೆ ಪ್ರಾರಂಭಿಸಬಹುದಾಗಿದೆ ಎಂದು ಸೂಚಿಸಲಾಗಿದೆ.

| ಕ್ರ.ಸಂ. | :ಷರತ್ತುಗಳು: |
|---|---|
| 1 | ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕಗಳನ್ನು ವಿದ್ಯಾರ್ಥಿಗಳಿಂದ ಆಕರಿಸಿ, ನಿಗದಿತ ಸಮಯದಲ್ಲಿ ವಿಶ್ವವಿದ್ಯಾಲಯಕ್ಕೆ ಭರಿಸುವುದು. |
| 2 | ಸ್ನಾತಕೋತ್ತರ ತರಗತಿಗಳು ಪ್ರಾರಂಭವಾಗುವ ದಿನಾಂಕ 08–09–2020 (ಮಂಗಳವಾರ) |

3ನೇ ಸೆಮಿಸ್ಟರ್ ಪ್ರವೇಶ ಮುಂದುವರಿಸಲು ನಿಗದಿಪಡಿಸಿದ ದಿನಾಂಕ

| ದಂಡ ರಹಿತ ದಿನಾಂಕ | ರೂ. 500/– ದಂಡ ಸಹಿತ ದಿನಾಂಕ |
|---|---|
| 24–08–2020 ರಿಂದ 02–09–2020 ರ ವರೆಗೆ | 03–09–2020 ರಿಂದ 07–09–2020 ರ ವರೆಗೆ |

ಪ್ರವೇಶ ಮುಂದುವರಿಸುವಾಗ ಪ್ರವೇಶ ಅರ್ಜಿ ನಮೂನೆಯಲ್ಲಿ ವಿದ್ಯಾರ್ಥಿಗಳು ಪೂರ್ಣ ವಿವರಗಳನ್ನು ಭರ್ತಿಮಾಡಬೇಕಾಗುತ್ತದೆ. ಆದ್ದರಿಂದ ಅರ್ಜಿ ನಮೂನೆಗಳನ್ನು ಪಡೆದುಕೊಳ್ಳಲು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1 ವಿದ್ಯಾರ್ಥಿಗಳಿಗೆ ಅರ್ಜಿ ನಮೂನೆ ಶುಲ್ಕ ರೂ. 250/– ನಿಗದಿಪಡಿಸಿದ್ದು ಹಾಗೂ ಸಾಮಾನ್ಯ/ಓ.ಬಿ.ಸಿ. ವಿದ್ಯಾರ್ಥಿಗಳಿಗೆ ರೂ. 500/– ಗಳನ್ನು ನಿಗದಿಪಡಿಸಲಾಗಿದೆ. ಈ ಅರ್ಜಿ ನಮೂನೆಯನ್ನು ನಮ್ಮ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ (www.rcub.ac.in) ಲಭ್ಯವಿದ್ದು, ವಿದ್ಯಾರ್ಥಿಗಳು ಇಲ್ಲಿಂದ ಡೌನಲೋಡ ಮಾಡಿಕೊಂಡು ಅರ್ಜಿ ನಮೂನೆ ಶುಲ್ಕವನ್ನು ಹಾಗೂ ನವೀಕರಣ ಮತ್ತು ಇತರೆ ಶುಲ್ಕವನ್ನು(ಶುಲ್ಕದ ಪ್ರತಿಯನ್ನು ಲಗತ್ತಿಸಲಾಗಿದೆ) ವಿಭಾಗವಾರು ಪ್ರತ್ಯೇಕವಾಗಿ ಚಲನ್ ಅಥವಾ ಡಿಡಿ ಮುಖಾಂತರ ಹಣಕಾಸು ಅಧಿಕಾರಿಗಳು ರಾಣಿಚನ್ನಮ್ಮ ವಿಶ್ವವಿದ್ಯಾಲಯ ವಿದ್ಯಾಸಂಗಮ, ಬೆಳಗಾವಿ ಇವರ ಹೆಸರಲ್ಲಿ ಪಾವತಿಸಿ ಲಗತ್ತಿಸಬೇಕಾಗುತ್ತದೆ. ಹಾಗೂ ಪ್ರವೇಶ ಮುಂದುವರಿಸಿದ ವಿದ್ಯಾರ್ಥಿಗಳ ಪ್ರತ್ಯೇಕ ಕೋರ್ಸವಾರು ಯಾದಿಯನ್ನು ಸಿದ್ಧಪಡಿಸಿಕೊಂಡು ಮೊದಲನೆ ಸೆಮೆಸ್ಟರ ವಿದ್ಯಾರ್ಥಿಗಳ ಯಾದಿಯನ್ನು ಸಲ್ಲಿಸುವ ಹಂತದಲ್ಲಿ ಮೂರನೆ ಸೆಮೆಸ್ಟರ ವಿದ್ಯಾರ್ಥಿಗಳ ಯಾದಿಯನ್ನು ಸಹಿತ ಏಕಾಲದಲ್ಲಿ ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗಕ್ಕೆ ಸಲ್ಲಿಸಲು ಕೋರಲಾಗಿದೆ.

ಸಹಿ/–

**ಕುಲಸಚಿವರು**

ಇವರಿಗೆ,

1. ಮುಖ್ಯಸ್ಥರುಗಳು, ಸ್ನಾತಕೋತ್ತರ ಎಲ್ಲ ಅಧ್ಯಯನ ವಿಭಾಗಗಳು, ರಾಚವಿ, ಬೆಳಗಾವಿ.
2. ನಿರ್ದೇಶಕರು, ವಚನ ಸಂಗಮ ಸ್ನಾತಕೋತ್ತರ ಕೇಂದ್ರ ತೊರವಿ ವಿಜಯಪುರ.
3. ಸಂಯೋಜಕರು, ಅನುಭಾವ ಸಂಗಮ ಸ್ನಾತಕೋತ್ತರ ಕೇಂದ್ರ ಬಾಗಲಕೋಟ.
4. ಸಂಯೋಜಕರು, ಸ್ನಾತಕೋತ್ತರ ಕೇಂದ್ರ ಮಿನಿ ವಿಧಾನ ಸೌಧದ ಕಟ್ಟಡ ಜಮಖಂಡಿ.
5. ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ.
6. ಸಂಯೋಜಿತ ಸ್ನಾತಕೋತ್ತ ಅಧ್ಯಯನ ವಿಭಾಗಗಳನ್ನು ನಡೆಸುತ್ತಿರುವ ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.